ಕ್ರಿಮಿನಲ್.ಮಿಸ್ಲೇನಿಯಸ್.ನಂ.114/2016
ಆರ್.ಡಬ್ಲ್ಯೂ-1.

**ಸಾಕ್ಷಿಯನ್ನು ಇಂದು ದಿನಾಂಕಃ 02.03.2022 ರಂದು ಪುನಃ ಕರೆದು ಪ್ರಮಾಣೀಕರಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ ಎದುರುದಾರ ಪರ ಶ್ರೀ ಎ.ಸಿ.ಟಿ. ವಕೀಲರಿಂದ**

ಶಾಮರಾವ 1 ನೇ ಅರ್ಜಿದಾರಳನ್ನು ಅಫಜಲಪೂರದಲ್ಲಿ ಮನೆ ಮಾಡಿ ಇಟ್ಟಿದ್ದ. ಆಕೆ ಮತ್ತು ಅವನ ಮಧ್ಯೆ ಭಿನ್ನಾಭಿಪ್ರಾಯ ಬಂದು ಆಕೆ ತವರು ಮನೆ ಧುತ್ತರಗಾಂವಕ್ಕೆ ಬಂದಳು. ಆಕೆ ಅಣ್ಣ ತಮ್ಮಂದಿರೊಂದಿಗೆ ಜಗಳ ಮಾಡಿ ಅವರಿಂದ ಪಾಲು ಪಡೆದುಕೊಂಡು ಸದರಿ ಹೊಲವನ್ನು ಬೇರೆಯವರಿಗೆ ಉಳುಮೆ ಮಾಡಲು ಹಚ್ಚಿದಳು. ಹಾಗೆ ಬಂದ ದುಡ್ಡಿನಿಂದ ಒಂದು ಕಿರಾಣಿ ಇಟ್ಟಿದ್ದಳು, ಅಂಗಡಿ ಇಟ್ಟ ನಂತರ ನನಗೆ ಫೋನ ಮಾಡಿದಳು. ನನಗೆ ಬರಲು ಹೇಳಿದಳು. ಇದಕ್ಕಿಂತ ಮೊದಲು ಆಕೆ ನನ್ನ ಅಣ್ಣನ ಮಕ್ಕಳ ಮೇಲೆ ಕೇಸು ಮಾಡಲು ವಿಚಾರ ನಡೆಸಿದ್ದಳು. ಅದು ನನಗೆ ಗೊತ್ತಾಗಿ ನಾನು ಹಿತ್ತಲಶಿರೂರ ಬಿಟ್ಟು ಆಳಂದ ಅಥವಾ ಕಲಬುರಗಿಯಲ್ಲಿ ಇರಬೇಕೆಂದು ವಿಚಾರ ಮಾಡಿದ್ದೆ. ನನ್ನ ಅಣ್ಣನ ಮಕ್ಕಳ ಮೇಲೆ ದೂರು ಸಲ್ಲಿಸಿದಲ್ಲಿ ಅರ ಭವಿಚ್ಯ ಹಾಳಾಗುತ್ತದೆ ಎಂದು ತಿಳಿದು ಊರು ಬಿಡಲು ನಿರ್ಧರಿಸಿದೆ. ಅಷ್ಟಾದ ನಂತರ ಆಕೆ ಫೋನ್ ಮಾಡಿದಳು. ನಾನು ಎಲ್ಲಾ ಬಿಟ್ಟು ಬಿಡುತ್ತೇನೆ, ನೀವು ಧುತ್ತರಗಾಂವಕ್ಕೆ ಬನ್ನಿ ಎಂದು ಹೇಳಿದಳು. ಅದಕ್ಕೆ ನಾನು ನಿರಾಕರಿಸಿದೆ. ಅದಾದ ನಂತರ ಆಕೆಯ ಕಾಕನ ಮಕ್ಕಳ ಕಡೆಯಿಂದ ನನಗೆ ಫೊನ್ ಮಾಡಿಸಿ ಧುತ್ತರಗಾಂವಕ್ಕೆ ನನ್ನನ್ನು ಕರೆಸಿಕೊಂಡಳು. ನಾನು ಧುತ್ತರಗಾಂವಕ್ಕೆ ಬಂದ ಮೇಲೆ 10-15 ದಿವಸಗಳ ಕಾಲ ನನ್ನೊಂದಿಗೆ ಚೆನ್ನಾಗಿ ಇದ್ದಳು. ಆದಾದ ನಂತರ ಮತ್ತೆ ಭಿನ್ನಾಭಿಪ್ರಾಯ ಶುರುವಾಯಿತು. ಆಕೆ ತನ್ನ ಚಟ ಬಿಟ್ಟಿರಲಿಲ್ಲ. ನಾನು ಸಾಯಂಕಾಲ ಊಟಕ್ಕೆ ಮನೆಗೆ ಹೋದಾಗ ಆಕೆಗೆ ಫೋನ್ ಬಂದಿತ್ತು, ನನ್ನೊಂದಿಗೆ ಜಗಳ ಮಾಡಿ ನನಗೆ ಮನೆಯಿಂದ ಕಳಿಸಿದಳು. ಫೋನ್ ಮಾಡಿದ ವ್ಯಕ್ತಿಯೊಂದಿಗೆ ಆಕೆ ಅನೈತಿಕ ಸಂಬಂಧ ಹೊಂದಿದ್ದಳು.

ಇದಾದ ನಂತರ 2-3 ಸಲ ಪಂಚಾಯತಿ ಸಹ ಆಯಿತು. ಪಂಚಾಯತಿ ಅಧ್ಯಕ್ಷರ ಸಮಕ್ಷಮ ಪಂಚಾಯತಿ ಮಾಡಿದಾಗ ಆಕೆ ನನ್ನೊಂದಿಗೆ ಇರಲು ನಿರಾಕರಿಸಿದಳು. ನಾನು ಆಕೆಯೊಂದಿಗೆ ಸರಿಯಾಗಿ ಜೀವನ ನಡೆಸಲು ಪ್ರಯತ್ನಿಸಿದಾಗಲು ಆಕೆ ತನ್ನೊಂದಿಗೆ ಇದ್ದ ವ್ಯಕ್ತಿಗಳ ಮೂಲಕ ನನಗೆ ಹೊಡೆಸಲು ಪ್ರಯತ್ನಿಸಿದಳು. ಆಗ ನನ್ನ ಮಗಳಾದ 2 ನೇ ಅರ್ಜಿದಾರಳಿಗೆ 12 ವರ್ಷಗಳಾಗಿತ್ತು. ಆಕೆ ತನ್ನ ಅಂಗಡಿಗೆ ಬೇಕಾದ ಸಾಮಾನು ತರಿಸುವ ಸಲುವಾಗಿ ರವಿಕುಮಾರ ತಂದೆ ಶಂಕರ ಮಲಶೆಟ್ಟಿ ಎಂಬುವವರಿಂದ ಹಣ ಪಡೆಯುತ್ತಿದ್ದಳು, ಸಾಲ ಮರುಪಾವತಿ ಕೇಳಿದಾಗ 2 ನೇ ಅರ್ಜಿದಾರಳಿಗೂ ಸಹ ಆತನೊಂದಿಗೆ ಅನೈತಿಕ ಸಂಬಂಧಕ್ಕೆ ತಳ್ಳಿದಳು. ಈ ವಿಚಾರ ಅರ್ಜಿದಾರಳ ಅಣ್ಣ ತಮ್ಮಂದಿರಿಗೂ ತಿಳಿಯಿತು. ಒಂದು ಸಲ 1 ನೇ ಅರ್ಜಿದಾರಳು ಯಾರ ಬಗ್ಗೆಯೋ ಮಾತನಾಡಿದಾಗ ಅವರು 1 ನೇ ಅರ್ಜಿದಾರಳೊಂದಿಗೆ ಜಗಳ ಮಾಡುತ್ತಿದ್ದರು. ಆನಂತರ 1 ನೇ ಅರ್ಜಿದಾರಳು ಊರು ಬಿಟ್ಟು ಹೋಗಿದ್ದಾಳೆ. ಅವಳು ಈಗ ಕಲಬುರಗಿಯಲ್ಲಿ ಇರುತ್ತಾಳೆ ಎಂದು ಸುದ್ದಿ ಬಂದಿದೆ. ಆಕೆ ಊರು ಬಿಟ್ಟು ಹೋದ ನಂತರ 2 ನೇ ಅರ್ಜಿದಾರಳು ಮತ್ತು ರವಿಕುಮಾರ ತಂದೆ ಶಂಕರ ಮಲಶೆಟ್ಟಿ ಈತನೊಂದಿಗೆ ಇದ್ದ ಫೇಸಬುಕ್ಕಿಗೆ ಬಂತು. 2 ನೇ ಅರ್ಜಿದಾರಳು ಸದರಿ ಸ್ಟೇಟಸ್ ಇಟ್ಟಿದ್ದಳು. ನಾನು ಅರ್ಜಿದಾರಳ ತವರು ಮನೆಯಲ್ಲಿಯೇ ಇದ್ದೇನೆ. ಸಿ.ಸಿ. ನಂ. 25/2017 ರ ಲೋಕ ಅದಾಲತ ಕಾಂಪ್ರಮೈಸ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು, ಕ್ರೈ ನಂ. 149/2016 ರಲ್ಲಿನ ಎಫ್.ಐ.ಆರ್. ನ್ನು ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು,

ಅದರಲ್ಲಿನ ಪಂಚನಾಮೆಯನ್ನುಯ ಹಾಜರುಪಸಿದ್ದು ಅದನ್ನು ನಿಡಿ-3 ಎಂದು, ಸಾಕ್ಷಿಗಳ ಹೇಳಿಕೆಗಳನ್ನು ನಿಡಿ-4 ಮತ್ತು 5 ಎಂದು, ಅಂತಿಮ ವರದಿಯನ್ನು ನಿಡಿ-6 ಎಂದು, ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು.

ಅರ್ಜಿದಾರಳು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರುತ್ತೇನೆ.

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.